# ಭರತನಾಟ್ಯದ 'ಕಣ್ಮಣಿ'

**ಭರತನಾಟ್ಯದ ಸಾಧನೆಯಲ್ಲಿ ಎತ್ತರೆತ್ತರಕ್ಕೆ ಏರುತ್ತಿರುವ ಎಂಜಿನಿಯರ್ ಯುವಕ ಗುರುರಾಜ್ ವಸಿಷ್ಟ, ವಿದುಷಿ ಗಂಗೂಬಾಯಿ ಹಾನಗಲ್ ಅವರಿಂದ 'ಕಣ್ಮಣಿ ಪುರಸ್ಕಾರ' ಸ್ವೀಕರಿಸಿದವರು. 'ಸನ್ನಿವೇಶಕ್ಕೆ ತಕ್ಕಂತೆ ನೃತ್ಯ' ಯುವ ಕಲಾವಿದ ಗುರುರಾಜ್ ವೈಶಿಷ್ಟ್ಯ.**

**■ ಉಮಾ ಅನಂತ್**

ಅದು 2007ನೇ ಇಸವಿ. ಹುಬ್ಬಳ್ಳಿಯಲ್ಲಿ ನಡೆದ ನೃತ್ಯ ಸಮಾರಂಭ. 'ಕನ್ನಡ ಮಕ್ಕಳ ಮನೆ' ಎಂಬ ಸಂಸ್ಥೆ ಆಯೋಜಿಸಿದ ವಿಶಿಷ್ಟ ಕಾರ್ಯಕ್ರಮ. ಹಿಂದೂಸ್ತಾನಿ ಸಂಗೀತ ಸಾಮ್ರಾಜ್ಞಿ ಗಂಗೂಬಾಯಿ ಹಾನಗಲ್ ಮುಖ್ಯ ಅತಿಥಿಗಳಾಗಿದ್ದ ಸುಂದರ ಸಮಾರಂಭವದು. ಬೆಂಗಳೂರಿನ 14 ವರ್ಷದ ಬಾಲಕ ಗುರುರಾಜ್ ವಸಿಷ್ಟ ಭರತನಾಟ್ಯದ ವಳವೂರು ಶೈಲಿಯಲ್ಲಿ 'ಜತಿಸ್ವರ' ನೃತ್ಯ ಮಾಡಿದ. ಕಷ್ಟಕರವಾದ ಕಾಲ್ಚಲನೆ, ಅಭಿನಯದಲ್ಲಿ ನಿಪುಣತೆಯಿಂದ ಕೂಡಿದ ವಿಶಿಷ್ಟ ನೃತ್ಯ ಭಾಗದ 'ಅಡವು'ಗಳನ್ನು ಅನೇಕ ಭಂಗಿ ಹಾಗೂ ತಾಳ ವೈವಿಧ್ಯಗಳಿಂದ ಕೊಂಚವೂ ಅಳುಕಿಲ್ಲದೆ ಪ್ರೇಕ್ಷಕರ ಮುಂದಿಟ್ಟ.

ನೃತ್ಯ ಕಾರ್ಯಕ್ರಮ ಮುಗಿದ ಬಳಿಕ ವಿದುಷಿ ಗಂಗೂಬಾಯಿ ಹಾನಗಲ್ ಹುಡುಗನನ್ನು ಪಕ್ಕದಲ್ಲಿ ಕೂರಿಸಿಕೊಂಡು ಹರಸಿ ಹಾರೈಸಿ 'ಕಣ್ಮಣಿ ಪುರಸ್ಕಾರ'ವನ್ನು ನೀಡಿದ ಬಳಿಕ ಹೇಳಿದ್ದು ಒಂದೇ ಮಾತು. 'ಹುಡುಗ್ರು ಶಾಸ್ತ್ರೀಯ ನೃತ್ಯ ಮಾಡೋದು ಬಾಳ ಕಡಿಮಿ. ನಿನ್ನಲ್ಲಿ ಪ್ರತಿಭೆ ಅದ, ಛೊಲೊ ಅಭ್ಯಾಸ ಮಾಡು, ಡಾನ್ಸ್ ಮಾಡೋದನ್ನ ಬಿಡಬ್ಯಾಡ...'

ಸುಮಾರು 12 ವರ್ಷಗಳ ಹಿಂದೆ ಗುರುರಾಜ್ ಖ್ಯಾತ ಸಂಗೀತ ವಿದುಷಿಯಿಂದ ಪಡೆದ ಈ ಅಮೂಲ್ಯ ನುಡಿಮುತ್ತು, ಹಾರೈಕೆ, ತಂದೆ ತಾಯಿಯರ ನಿರಂತರ ಪ್ರೋತ್ಸಾಹ ಈ ನೃತ್ಯ ಕಲಾವಿದನನ್ನು ಇಂದು ಬಹು ಎತ್ತರಕ್ಕೆ ಬೆಳೆಸಿದೆ. ವೃತ್ತಿಯಲ್ಲಿ ಎಂಜಿನಿಯರ್ ಪದವಿ ಪಡೆದರೂ ಸತತ ಪರಿಶ್ರಮ, ಶ್ರದ್ಧೆ, ಕಲಾರಾಧನೆಗೆ ತೆರೆದುಕೊಳ್ಳುವ ಮನಸ್ಸು, ಮೇಲಾಗಿ ತನ್ನಂತೆಯೇ ಇನ್ನಷ್ಟು ಮಂದಿ ಭರತನಾಟ್ಯದಲ್ಲಿ ಪಳಗಬೇಕು

